ಅಂದು ಸಂಜೆ ಸೆಂಟ್ರಲ್ ಚರ್ಚ್ ಆಫ್ ಕ್ರೈಸ್ಟ್‌ನಲ್ಲಿ ಸ್ವಾಮೀಜಿ ಭಾಷಣ ಮಾಡಿದರು. 'ಮಹಾನ್ ಪೌರಸ್ತ್ಯ ವಿದ್ವಾಂಸರೂ, ಹಿಂದೂ ಸಂನ್ಯಾಸಿಯೂ ಆದ ಸ್ವಾಮಿ ವಿವೇಕಾನಂದರು ಆಕರ್ಷಣೀಯ ವ್ಯಕ್ತಿ. ಏಕೆಂದರೆ ಅವರ ಭಾಷಣಕ್ಕೆ ಎಲ್ಲ ಟಿಕೆಟ್‌ಗಳೂ ಬಹು ಮುಂಚೆಯೇ ವಿಕ್ರಯವಾಗಿಬಿಟ್ಟಿವೆ' ಎಂದು ನವೆಂಬರ್ ೨೫ರಂದೇ ಡೈಲಿ ನ್ಯೂಸ್ ವರದಿ ಮಾಡಿತ್ತು. ನವೆಂಬರ್ ೨೬ರಂದು ಇದೇ ಪತ್ರಿಕೆ ಘೋಷಿಸಿತು, 'ಯಾವ ಚಿಂತನಾಶೀಲ ವ್ಯಕ್ತಿಯೂ ಇದನ್ನು ತಪ್ಪಿಸಿಕೊಳ್ಳಬಾರದು' ಎಂದು.

ಮರುದಿನ ಡೈಲಿ ಐಯೋವಾ ಕ್ಯಾಪಿಟಲ್ ಮತ್ತು ಡೆಮೊಯ್ನೆಸ್ ಡೈಲಿ ನ್ಯೂಸ್ - ಎರಡೂ ಪತ್ರಿಕೆಗಳು ಸ್ವಾಮೀಜಿಯವರ ಭಾಷಣದ ವಿಸ್ತೃತ ವರದಿಯನ್ನು ಪ್ರಕಟಿಸಿದವು. ಅದರಲ್ಲಿ ಮೊದಲ ಪತ್ರಿಕೆಯ ವರದಿಯ ಭಾಗಗಳು ಹೀಗಿವೆ:

''ಡೆ ಮೊಯ್ನೆಸ್ ನಗರದ ಜನರಿಗೆ ಇದೊಂದು ಅಪೂರ್ವ ಅವಕಾಶವೇ ಸರಿ. ಪುರಾತನ ಹಿಂದೂಧರ್ಮದ ಸಂನ್ಯಾಸಿಯೊಬ್ಬರು ತಮ್ಮ ಧರ್ಮದ ಸಂತೋಷಜನಕವಾದ ಪ್ರಸ್ತುತಿಯನ್ನು ಮಾಡಿದರು. ಅದರ ವೈಶಿಷ್ಟ್ಯಗಳನ್ನು ಮತ್ತು ಅಂತರ್ಗತವಾದ ತತ್ತ್ವಗಳನ್ನು ಪರಿಚಯಿಸಿದರು. ಬಹಳ ದೊಡ್ಡ ಜನಸಂದಣಿ ಅವರ ಪ್ರವಚನವನ್ನು ಕೇಳಲು ನೆರೆದಿತ್ತು. ಸುಮಾರು ೫೦೦ರಿಂದ ೬೦೦ ಜನರು ಸೇರಿದ್ದರು. ಚರ್ಚಿನ ಮುಖ್ಯ ಸಭಾಂಗಣ ಜನರಿಂದ ಕಿಕ್ಕಿರಿದಿತ್ತು. ಸುಮಾರು ಇನ್ನೂರು ಜನರು ಗ್ಯಾಲರಿಯಲ್ಲಿ ಕುಳಿತಿದ್ದರು.

''ಎಲ್ಲ ಧರ್ಮಗಳೂ ಒಂದು ಪ್ರಮುಖ ಪ್ರಶ್ನೆಯನ್ನು ಉತ್ತರಿಸಲೆಂದೇ ಇರುವ ಬಹುಮುಖೀ ಪ್ರಯತ್ನಗಳು. ಅದೆಂದರೆ, 'ನಾನು ಯಾರು?' ಎನ್ನುವುದು. ಈ ಪ್ರಶ್ನೆಯು 'ಎಲ್ಲಿಂದ ನಾನು ಬಂದಿದ್ದೇನೆ?', 'ಎಲ್ಲಿಗೆ ಹೋಗುತ್ತಿದ್ದೇನೆ?' ಎಂಬ ಇನ್ನಿತರ ಪ್ರಶ್ನೆಗಳನ್ನು ಮತ್ತೆ ಮತ್ತೆ ಮರುಕಳಿಸುತ್ತದೆ. ಭಾಷಣಕಾರರ ಪ್ರಕಾರ, ಹಿಂದೂಧರ್ಮದ ಮೂಲತತ್ತ್ವ 'ನಾವೆಲ್ಲರೂ ದಿವ್ಯಾನುಸಂಭೂತರು' ಎನ್ನುವುದು. ಇದು ಅಂದು ಸ್ವಾಮಿ ವಿವೇಕಾನಂದರು ಮಾಡಿದ ಭಾಷಣದ ತಿರುಳಾಗಿತ್ತು.''

*(ಮುಂದುವರಿಯುವುದು)*





# ನುಡಿಗುಚ್ಛಗಳ ಸಂಗ್ರಹ 'ಸುವಿಚಾರ ಸುಧೆ'

ನಿವೃತ್ತ ಪಾಚಾರ್ಯರಾದ ಡಾ. ವ್ಹಿ.ಎ.ಬೆನಕಹಾಳ ಅವರು ತಮ್ಮ ವೃತ್ತಿ ಬದುಕಿನ ೪-೫ ದಶಕಗಳ ಅವಧಿಯಲ್ಲಿ ವಿವಿಧ ಸಂದರ್ಭಗಳಲ್ಲಿ ಪ್ರಸ್ತಾಪಿಸಿದ ವಿಚಾರಗಳನ್ನು ಬಾನುಲಿ ಕೇಂದ್ರದಲ್ಲಿ ನುಡಿಗುಚ್ಛಗಳಾಗಿ ಬಿತ್ತರಿಸಿ, ಅವುಗಳನ್ನು ಬಹುರೂಪಕ್ಕಿಳಿಸಿ ಪ್ರಕಟಿಸಿದ್ದಾರೆ- ಕೃತಿಯ ಹೆಸರು **'ಸುವಿಚಾರ ಸುಧೆ'**. ಇದರ ಶೀರ್ಷಿಕೆಯೇ ಸೂಚಿಸುವಂತೆ, ಬಾಳಿನಲ್ಲಿ ಕಂಡು ಅನುಭವಿಸಿದ, ಕೇಳಿ ತಿಳಿದು ಚಿಂತನೆಯ ಕುಲುಮೆಯಲ್ಲಿ ಎರಕಹೊಯ್ದ ವಿಚಾರಧಾರೆಗಳ ಸಂಗ್ರಹ ಇದಾಗಿದೆ. ಹೆಚ್ಚು ದೀರ್ಘವಲ್ಲದ, ಹೆಚ್ಚೆಂದರೆ ಎರಡು ಪುಟಗಳಷ್ಟಿರುವ ೫೨ ಚಿಂತನೆಗಳು ಇಲ್ಲಿವೆ. ಸುಲಭವಾಗಿ ಓದಿ ಮುಗಿಸಬಹುದಾದ, ಯಾವ ಪುಟದಿಂದ ಬೇಕಾದರೂ ಓದಬಹುದಾದ ರೀತಿಯಲ್ಲಿ ಸ್ವತಂತ್ರವಾದ ರಚನೆಗಳಿವು.

ಇಲ್ಲಿನ ವಿಚಾರಗಳಲ್ಲಿ ವಿಷಯವೈವಿಧ್ಯವಿದೆ. ಶಿಕ್ಷಣ, ವೃತ್ತಿಪರತೆ, ಸಂಸ್ಕೃತಿ, ನೈತಿಕ ಬದುಕು, ರಾಷ್ಟ್ರನಾಯಕರು, ಸಮಯಪ್ರಜ್ಞೆ, ಏಕಾಗ್ರತೆ - ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಲೇಖಕರ ಚಿಂತನೆ ಇಲ್ಲಿ ಮೂಡಿ ಬಂದಿದೆ. ಹೆಚ್ಚಿನ ಬರಹಗಳಲ್ಲಿ ಒಂದೊಂದು ಘಟನೆ ಅಥವಾ ಕಥೆಯಿರುತ್ತದೆ. ತಮ್ಮ ಚಿಂತನೆಯನ್ನು ಈ ಘಟನೆ-ಕಥೆ-ದೃಷ್ಟಾಂತಗಳ ಮೂಲಕ ಲೇಖಕರು ವಿವರಿಸುವುದರಿಂದ ಓದುಗರಿಗೆ ಹೇಳಬೇಕಿದ್ದ ಪ್ರಧಾನ ವಿಷಯ ಚೆನ್ನಾಗಿ ಮನದಟ್ಟಾಗುತ್ತದೆ.

ದೀರ್ಘಕಾಲ ಬೋಧನೆ, ಚಿಂತನೆ ಹಾಗೂ ಮಾರ್ಗದರ್ಶನಗಳಲ್ಲಿ ತೊಡಗಿ ಪಕ್ವಗೊಂಡ ಹಿರಿಯ ಮನಸ್ಸು ಮುಂದಿನ ತಲೆಮಾರಿಗೆ ದಾಟಿಸಬಹುದಾದ ಸಂಪತ್ತೆಂದರೆ ಅನುಭವದಿಂದ ಮೂಡಿಬಂದ ನೈತಿಕ ಮೌಲ್ಯಗಳು. ಹೊಸ ಪೀಳಿಗೆಯ ಜನಾಂಗವು ಹಿರಿಯ ತಲೆಮಾರಿನ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ಕಲಿತು, ಮುಂದಕ್ಕೆ ಹೊಸ ಸಮಾಜವನ್ನು ಕಟ್ಟಿಕೊಳ್ಳುವುದು ಅತ್ಯಂತ ಮುಖ್ಯವಾದ ಸಾಮಾಜಿಕ ಪ್ರಕ್ರಿಯೆ. ಸುಸಂಸ್ಕೃತ ಸಮಾಜದಲ್ಲಿ ಈ ಪ್ರಕ್ರಿಯೆ ಸಹಜವಾಗಿ ನಡೆಯುವುದು. ಇಂಥ ಸಾಮಾಜಿಕ, ಸಾಂಸ್ಕೃತಿಕ ಮುನ್ನಡೆಗೆ ನೆರವಾಗಬಲ್ಲ ಹತ್ತುಹಲವು ಅಂಶಗಳಲ್ಲಿ 'ಸುವಿಚಾರ ಸುಧೆ'ಯಂತಹ ಚಿಂತನೆಗಳ ಗುಚ್ಛವೂ ತನ್ನ ಪಾತ್ರವಹಿಸುತ್ತದೆ. ಯುವಪೀಳಿಗೆ ಇಂತಹ ಕೃತಿಗಳಿಂದ ಸಾಕಷ್ಟು ಪ್ರೇರಣೆ ಪಡೆಯಬಹುದಾಗಿದೆ.




**ಕೃತಿ:** ಸುವಿಚಾರ ಸುಧೆ

**ಲೇಖಕರು :** ಡಾ. ವ್ಹಿ.ಎ. ಬೆನಕನಾಳ

**ಪ್ರಕಾಶನ :** ಶ್ರೀಶೈಲ ಪ್ರಕಾಶನ ''ಓದು ಮನೆ'', ವಾರ್ಡ್ ಸಂಖ್ಯೆ 6, ಗುಳೇದಗುಡ್ಡ-587203, ಜಿ. ಬಾಗಲಕೋಟ

**ಪುಟ:** 120 **ಬೆಲೆ :** 80